# ಕೋಲಾರ ಜಿಲ್ಲೆಯ ಸಂಕ್ಷಿಪ್ತ ಪಕ್ಷಿನೋಟ

**2017–18 ರಲ್ಲಿದ್ದಂತೆ**




**ಶತಶೃಂಗ ಪರ್ವತ ಶ್ರೇಣಿಯ ತಪ್ಪಲು**

# ಕೋಲಾರ ಜಿಲ್ಲೆಯ ಕಿರು ಪರಿಚಯ

ಕನ್ನಡ ನಾಡು ಚಿನ್ನದ ಬೀಡು ಎಂಬ ನಾಣ್ನುಡಿಗೆ ತಕ್ಕಂತೆ ಚಿನ್ನದ ನಾಡು ಎಂದು ಪ್ರಖ್ಯಾತವಾದ ಕೋಲಾರ ಗೋಲ್ಡ್ ಫೀಡ್ ಕ್ಷೇತ್ರವನ್ನು ಕೋಲಾರ ಜಿಲ್ಲೆಯು ತನ್ನ ವ್ಯಾಪ್ತಿಯಲ್ಲಿ ಪ್ರಸ್ತುತ 6 ಕಂದಾಯ ತಾಲ್ಲೂಕಿನಲ್ಲಿ 06 ಶೈಕ್ಷಣಿಕ ವಲಯಗಳನ್ನು ಹೊಂದುವುದರೊಂದಿಗೆ 06 ವಿಧಾನ ಸಭಾ ಮತ ಕ್ಷೇತ್ರ, 01 ವಿಧಾನ ಪರಿಷತ್ ಕ್ಷೇತ್ರ 01 ಸಂಸದರನ್ನು ಹಾಗೂ 30 ಜಿಲ್ಲಾ ಪಂಚಾಯತ್ ಸದಸ್ಯರನ್ನು ಹೊಂದುವುದರ ಮೂಲಕ ಭೂಗೋಳಿಕವಾಗಿ ಮತ್ತು ವಿದ್ಯಾರ್ಥಿಗಳ/ ಶಿಕ್ಷಕರ ಸಾಧನೆಗಳಲ್ಲಿಯೂ ಮುಂದುವರಿದ ಜಿಲ್ಲೆಯಾಗಿರುತ್ತದೆ.

ಕೋಲಾರ ಜಿಲ್ಲೆಯಲ್ಲಿ ಶತಶೃಂಗ ಪರ್ವತ ಎಂದು ಪ್ರಸಿದ್ಧವಾಗಿರುವ ಬೆಟ್ಟದ ಮೇಲೆ ಶಿವನ ದೇವಸ್ಥಾನದಲ್ಲಿರುವ ಬಸವಣ್ಣನ ಬಾಯಿಯಿಂದ ಬಿರು ಬೇಸಿಗೆ ಎನ್ನದೆ ಸದಾ ಕಾಲವು ಅಮೃತದಂತಹ ಜಲಧಾರೆ ಹರಿಯುತ್ತಿದೆ. ಇದು ದಕ್ಷಿಣ ಕಾಶಿ ಎಂದು ಸಹ ಪ್ರಸಿದ್ಧವಾಗಿದೆ, ಕೋಲಾರ ಜಿಲ್ಲೆಯು ರೇಷ್ಮೆ, ಹಾಲು, ಮಾವು ಹಾಗೂ ಚಿನ್ನಕ್ಕೆ ಪ್ರಸಿದ್ಧಿಯಾಗಿದ್ದು, ದೇಶ ವಿದೇಶಗಳಲ್ಲಿಯೂ ಪ್ರಖ್ಯಾತವಾಗಿದೆ. ಜಿಲ್ಲೆಯ ಧಾರ್ಮಿಕ ಮತ್ತು ಸಾಂಸ್ಕೃತಿಕ ಸ್ಥಳಗಳಾದ ಮುಳಬಾಗಿಲಿನ ಆಂಜನೇಯ, ಕುರುಡುಮಲೆಯ ಗಣಪತಿ, ಬಂಗಾರುತಿರುಪತಿಯ ವೆಂಕಟೇಶ್ವರ ಕೆ.ಜಿ.ಎಪ್ ವಲಯದ ಕೋಟಿಲಿಂಗೇಶ್ವರದಲ್ಲಿನ ಸಹಸ್ತ್ರಾರು ಲಿಂಗಗಳು, ಮಾಲೂರು ತಾಲ್ಲೂಕಿನ ಚಿಕ್ಕತಿರುಪತಿ ವೆಂಕಟೇಶ್ವರ ದೇವಸ್ಥಾನಗಳು ಪ್ರೇಕ್ಷಣೀಯ ಸ್ಥಳಗಳಾಗಿದ್ದು ಈ ಜಿಲ್ಲೆಯ ವ್ಯಾಪ್ತಿಗೆ ಒಳಪಟ್ಟಿದ್ದು, ಗಂಗರಕಾಲದ ಕೋಲಾರಮ್ಮ, ಸೋಮೇಶ್ವರ ದೇವಾಲಯಗಳನ್ನು ಹೊಂದಿದೆ. ಕೋಲಾರ ಜಿಲ್ಲೆಯು ನೀರಿನ ಪೂರೈಕೆಗಾಗಿ ಕೆರೆಗಳನ್ನು ಹೊಂದಿರುತ್ತದೆ.

ಜಿಲ್ಲೆಯ ಕರ್ನಾಟಕ ರಾಜ್ಯ ಪ್ರಥಮ ಮುಖ್ಯ ಮಂತ್ರಿ ಸ್ಥಾನವನ್ನು ಅಲಂಕರಿಸಿದ್ಧ ಕೆ.ಚಂಗಲ ರೆಡ್ಡಿ ರವರು ಕೋಲಾರ ಜಿಲ್ಲೆಯವರೇ. ಮಾಲೂರು ತಾಲ್ಲೂಕಿನವರಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜ್ಞಾನಪೀಠ ಪುರಸ್ಕೃತ ಸಾಹಿತಿಗಳಾಗಿದ್ದು, ಮುಂಕುತಿಮ್ಮನ ಕಗ್ಗದ ನಿರ್ಮಾತೃ ಮಾನ್ಯ ಡಿ.ವಿ.ಗುಂಡಪ್ಪರವರು ಮುಳಬಾಗಿಲು ತಾಲ್ಲೂಕಿನವರಾಗಿದ್ದಾರೆ. 2017ರ ಐ.ಎ.ಎಸ್. ಪರೀಕ್ಷೆಯಲ್ಲಿ ಪ್ರಥಮ ರ‍್ಯಾಂಕ್ ಗಳಿಸಿರುವ ಕುಮಾರಿ ನಂದಿನಿ ರವರು ಕೋಲಾರ ಜಿಲ್ಲೆಯವರಾಗಿದ್ದಾರೆ. ಈ ಜಿಲ್ಲೆಯಲ್ಲಿ ವ್ಯಾಸಂಗ ಮಾಡಿದ ಹಲವಾರು ವಿದ್ಯಾರ್ಥಿಗಳು ಉತ್ತಮ ಡಾಕ್ಟರ್‌ಗಳಾಗಿ ಇಂಜಿನಿಯರ್‌ಗಳಾಗಿ ಹಾಗೂ ಸಂಶೋದಕರಾಗಿ ದೇಶ ವಿದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಜಿಲ್ಲೆಯ ಪ್ರತಿಷ್ಠೆಯನ್ನು ಹೆಚ್ಚಿಸಿದ್ದಾರೆ.

ಜಿಲ್ಲೆಯು ರಾಜಧಾನಿ ಬೆಂಗಳೂರಿಗೆ ಕೇವಲ 70 ಕಿ.ಮೀ ಅಂತರದಲ್ಲಿದ್ದು, ಶೈಕ್ಷಣಿಕವಾಗಿ ಪ್ರಗತಿ ಹೊಂದಿರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿದ್ದು, ಉತ್ತಮ ಸಾಧನೆ ಮಾಡಿರುತ್ತಾರೆ.

ಪ್ರಸ್ತುತ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 7 ಸ್ಥಾನ ಪಡೆದಿದ್ದು, ಶಿಕ್ಷಕರ ಉತ್ತಮ ಪರಿಶ್ರಮ ಹಾಗೂ ಅಧಿಕಾರಿಗಳ ಪ್ರೋತ್ಸಾಹದಿಂದ ಶಾಲೆಯ ಶೈಕ್ಷಣಿಕ ಪ್ರಗತಿ ಉತ್ತಮವಾಗಿದೆ.

2011ರ ಜನಗಣತಿಯ ಪ್ರಕಾರ ಜಿಲ್ಲೆಯ ಸಾಕ್ಷರತಾ ಪ್ರಮಾಣ 87.88 ಇದ್ದು ಪುರುಷ ಸಾಕ್ಷರರು91.28 ಮತ್ತು ಮಹಿಳಾ ಸಾಕ್ಷರರು.85.29 ಇದೆ.

**ಜಿಲ್ಲಾ ಪಂಚಾಯತ್, ಕೋಲಾರ**

**ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಾರ್ಯಾಲಯ, ಕೋಲಾರ ಜಿಲ್ಲೆ, ಕೋಲಾರ**

ಕಛೇರಿ ದೂರವಾಣಿ: 08152 222020 Email. Id – ddpi.edu.karklr@nic.in

**ಕೋಲಾರ ಶೈಕ್ಷಣಿಕ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಕ್ಷಿಪ್ತ ವಿವರ**

**01. ಉಪನಿರ್ದೇಶಕರ ಕಛೇರಿ ಸಿಬ್ಬಂದಿ ವಿವರ**

| ಕ್ರ ಸಂ | ಹುದ್ದೆಯ ವಿವರ | ಮಂಜೂರಾದ ಹುದ್ದೆಗಳು | ಕರ್ತವ್ಯ ನಿರ್ವಹಿಸುತ್ತಿರುವವರು | ಖಾಲಿ ಇರುವ ಹುದ್ದೆಗಳು |
|---|---|---|---|---|
| 01 | ಉಪನಿರ್ದೇಶಕರು (ಆಡಳಿತ) | 01 | 01 | 0 |
| 02 | ಶಿಕ್ಷಣಾಧಿಕಾರಿಗಳು | 02 | 02 | 0 |
| 03 | ಡಿವೈಪಿಸಿ ಎಸ್.ಎಸ್.ಎ &<br>ಆರ್.ಎಂ.ಎಸ್.ಎ | 01<br>01 | 01<br>00 | 01<br>00 |
| 04 | ವಿಷಯ ಪರಿವೀಕ್ಷಕರು | 05 | 03 | 02 |
| 05 | ಎ.ಪಿ.ಸಿ.ಓ | 02 | 02 | 00 |
| 06 | ವೃತ್ತಿ ಶಿಕ್ಷಣ ವಿಷಯ ಪರಿವೀಕ್ಷಕರು | 01 | 01 | 00 |
| 07 | ಪತ್ರಾಂಕಿತ ಸಹಾಯಕರು | 01 | 00 | 01 |
| 08 | ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕರು | 01 | 00 | 01 |
| 09 | ಸಹಾಯಕ ಸಾಂಖ್ಯಿಕ ಅಧಿಕಾರಿಗಳು | 01 | 00 | 01 |
| 10 | ಉರ್ದು ಶಿಕ್ಷಣ ಸಂಯೋಜಕರು | 01 | 01 | 0 |
| 11 | ಅಧೀಕ್ಷಕರು | 03 | 02 | 01 |
| 12 | ಪ್ರಥಮ ದರ್ಜೆ ಸಹಾಯಕರು | 08 | 08 | 00 |
| 13 | ದ್ವಿತಿಯ ದರ್ಜೆ ಸಹಾಯಕರು | 06 | 06 | 00 |
| 15 | ಬೆರಳಚ್ಚುಗಾರರು | 03 | 01 | 02 |
| 16 | ದ್ವಿವಸ ಸಹಿತ ಬೆರಳಚ್ಚುಗಾರರು | 01 | 01 | 00 |
| 17 | ಶೀಘ್ರಲಿಪಿಗಾರರು | 01 | 00 | 01 |
| 18 | ವಾಹನ ಚಾಲಕರು | 01 | 01 | 00 |
| 19 | ಡಿ ದರ್ಜೆ ನೌಕರರು | 05 | 05 | 00 |

ಜಿಲ್ಲೆಯ ಶೈಕ್ಷಣಿಕವಾಗಿ ಮತ್ತು ಆಡಳಿತಾತ್ಮಕವಾಗಿ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ. ವ್ಯವಸ್ಥಾಪಕರು ಹುದ್ದೆ ಮಂಜೂರಾತಿ ಅಗತ್ಯವಾಗಿರುತ್ತದೆ. ಹಾಗೂ ಖಾಲಿ ಇರುವ ಹುದ್ದೆಗಳನ್ನು ತುಂಬುವ ಅಗತ್ಯವಿರುತ್ತದೆ.

**02. ಶಾಲೆಗಳ ವಿವರ:–**

| ಶಾಲೆಗಳ ವಿಧ | ಪ್ರಾಥಮಿಕ | ಪ್ರೌಢ | ಒಟ್ಟು |
|---|---|---|---|
| ಸರ್ಕಾರಿ | 1817 | 125 | 1942 |
| ಸಮಾಜ ಕಲ್ಯಾಣ ಇಲಾಖೆ | 25 | 16 | 41 |
| ಸ್ಥಳೀಯ ಸಂಸ್ಥೆ | 0 | 0 | 0 |
| ಅನುದಾನಿತ | 44 | 59 | 103 |
| ಅನುದಾನ ರಹಿತ | 321 | 155 | 476 |

| | | | |
|---|---|---|---|
| ಸೇಂಟ್ರಲ್ | 2 | 2 | 4 |
| ಒಟ್ಟು | 2209 | 357 | 2566 |

**03. ಮಕ್ಕಳ ವಿವರ:– (ಡಿಸೆಂಬರ್ 2017 ಕೆ.ಡಿ.ಪಿ)**

| ತರಗತಿ | ಮಕ್ಕಳ ದಾಖಲಾತಿ | ಹಾಜರಾತಿ | ಶೇ. ಹಾಜರಿ |
|---|---|---|---|
| **1 ರಿಂದ 5** | **116530** | **116378** | **99.86** |
| **6 ರಿಂದ 8** | **68193** | **68093** | **98.85** |
| **9 ರಿಂದ 10** | **41704** | **41634** | **99.83** |
| **1 ರಿಂದ 10** | **226424** | **226105** | **99.85** |

**04. ಶಿಕ್ಷಕರ ಹುದ್ದೆಗಳು ಮಂಜೂರು ಮತ್ತು ಖಾಲಿ ಹುದ್ದೆಗಳ ವಿವರ:–**

| ವಿವರ | ಮಂಜೂರು | ಕರ್ತವ್ಯ ನಿರ್ವಹಿಸು ತ್ತಿರುವವರು | ಖಾಲಿ ಹುದ್ದೆಗಳು |
|---|---|---|---|
| ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು | 5921 | 5423 | 598 |
| ಸರ್ಕಾರಿ ಪ್ರೌಢಶಾಲಾ ಶಿಕ್ಷಕರು | **1321** | **1102** | **219** |
| ಒಟ್ಟು | **1342** | **65** | **817** |

## 05. 2017–18ನೇ ಸಾಲಿನಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಅತಿಥಿ ಶಿಕ್ಷಕರ ನೇಮಕಾತಿ:

1. ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ 598 ಹುದ್ದೆಗಳಲ್ಲಿ 214 ಅತಿಥಿ ಶಿಕ್ಷಕರ ನೇಮಕಾತಿ ಮಾಡಲಾಗಿದೆ
2. ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ 219 ಹುದ್ದೆಗಳಲ್ಲಿ 60 ಅತಿಥಿ ಶಿಕ್ಷಕರ ನೇಮಕಾತಿ ಮಾಡಲಾಗಿದೆ

## 06. ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ:

1. ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ 106 ಹುದ್ದೆಗಳಿಗೆ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ

**07. ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶದ ವಿವರ:–**

| ವರ್ಷ | ಪರೀಕ್ಷೆಗೆ ಕುಳಿತವರು | ಉತ್ತೀರ್ಣರಾದವರು | ಪ್ರತಿಶತ ಸಾಧನೆ | ರಾಜ್ಯ ಮಟ್ಟದ ರ್‍ಯಾಂಕ್ |
|---|---|---|---|---|
| 2015–16 | 20406 | 16035 | 79.16 | 20 |
| 2016–17 | **19652** | **15428** | **67.87** | **07** |

**ದಿನಾಂಕ:09–02–2018**

**ಉಪನಿರ್ದೇಶಕರು, (ಆಡಳಿತ) ಸಾಶಿಇ,**
**ಕೋಲಾರ ಜಿಲ್ಲೆ, ಕೋಲಾರ**